# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪ ವಿಭಾಗ

ಕೆಂಪೇಗೌಡ ವಾರ್ಡ್ ನಂ-01ರಲ್ಲಿ ದಿನಾಂಕ: 04-09-2021. ರಂದು ನಡೆದ

ಸಮಿತಿ ಸಭಾ ನಡವಳಿ.

ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.

1. ಶ್ರೀ.ರಜನಿಕಾಂತ್ ಮಳ್ಳಿ, ನೋಡಲ್ ಅಧಿಕಾರಿಗಳು.
2. ಶ್ರೀ.ಮಲ್ಲಿನಾಥ ಮಲ್ಕಾಪುರ, ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿ.
3. ಶಶಿಕುಮಾರ್ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ
4. ಶ್ರೀ.ವಿವೇಕ್, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ-01.

ವಾರ್ಡ್ ಸಮಿತಿಯ ಪ್ರಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ನೋಡೆಲ್ ಅಧಿಕಾರಿಗಳು ಹಾಗೂ ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲು ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳನ್ನು ಕೋರಲಾಯಿತು.

1. ಕೆಂಪೇಗೌಡ ವಾರ್ಡ್ ನಂ-01ರ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಸಮರ್ಪಕವಾಗಿ ನಡೆಯುತ್ತಿಲ್ಲವೆಂದು ಹಾಗೂ ವಾರ್ಡ್‌ನ ಪರಿಮಿತಿಯಲ್ಲಿ ಸುಮಾರು ತಿಂಗಳುಗಳಿಂದ ಹಿರಿಯ ಆರೋಗ್ಯ ಪರಿವೀಕ್ಷಕರು ಇಲ್ಲದೇ ಇರುವ ಬಗ್ಗೆ ಕೂಡಲೇ ಹಿರಿಯ ಆರೋಗ್ಯ ಪರಿವೀಕ್ಷಕರನ್ನು ನಿಯೋಜಿಸಬೇಕೆಂದು ಶ್ರೀ.ಅ.ಬ.ಶಿವಕುಮಾರ್ ರವರು ಸಭೆಯಲ್ಲಿ ಕೋರಿದರು.

2. ಕೆಂಪೇಗೌಡ ವಾರ್ಡ್ ನಂ-01ರ ವ್ಯಾಪ್ತಿಯಲ್ಲಿರುವ ಕೂರ್ಲಪ್ಪ ಬಡಾವಣೆಯಲ್ಲಿರುವ ಭಾಕಿ ಉಳಿದಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕುಂಠಿತಗೊಂಡಿದ್ದು, ಕೂಡಲೇ ತ್ವರಿತಗತಿಯಲ್ಲಿ ಕಾಮಗಾರಿಯನ್ನು ನಿರ್ವಹಿಸಲು ಸಭೆಯಲ್ಲಿ ಸಾರ್ವಜನಿಕರು ಕೋರಿದರು.
3. ವಾರ್ಡ್‌ಗಳ ವ್ಯಾಪ್ತಿಯಲ್ಲಿ ಕೊವಿಡ್ -19 ರ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಲು ಹಾಗೂ ವ್ಯಾಕ್ಸಿನ್ ಹಾಕಿಸಿಕೊಳ್ಳುವುದರ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.
4. ಕೆಂಪೇಗೌಡ ವಾರ್ಡ್ ನಂ -01ರ ವ್ಯಾಪ್ತಿಯಲ್ಲಿ ಡ್ರೈ ವೇಸ್ಟ್ ವಾಹನಗಳು 3 ಸಂಖ್ಯೆಯಿಂದ ಇದರಿಂದ 4 ದಿನಗಳಿಗೊಮ್ಮೆ ಒಣ ತ್ಯಾಜ್ಯ ಸಂಗ್ರಹಣೆ ಮಾಡುತ್ತಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ 3 ಸಂಖ್ಯೆ ವಾಹನಗಳನ್ನು ಒಣತ್ಯಾಜ್ಯ ಸಂಗ್ರಹಣೆ ಮಾಡಲು ಒದಗಿಸಿಕೊಡಲು ಸಭೆಯಲ್ಲಿ ಕಿರಿಯ ಆರೋಗ್ಯ ಪರಿವೀಕ್ಷಕರು ನೋಡೆಲ್ ಅಧಿಕಾರಿಗಳಿಗೆ ಕೋರಿದರು.
5. ಯಲಹಂಕ ಕೆಂಪೇಗೌಡ ವಾರ್ಡ್ ನಂ -01ರ ವ್ಯಾಪ್ತಿಯಲ್ಲಿರುವ 401 ಬಸ್ ಸ್ಟಾಪ್‌ನಿಂದ ಬಸ್‌ಗಳು ಬಿಡಿಕೆ ಸಿಗ್ನಲ್‌ನಲ್ಲಿ ನಿಲ್ಲಿಸುತ್ತಿದ್ದು, ಸಿಗ್ನಲ್ ಬಿಟ್ಟರೂ ಸಹ ಬಸ್‌ಗಳು ಸಂಚರಿಸದೇ ಇರುವುದರಿಂದ ಸರ್ಕಾರಿ ಆಸ್ಪತ್ರೆ ರಸ್ತೆಯಲ್ಲಿ ಟ್ರಾಫಿಕ್ ಜಾಮ್ ಉಂಟಾಗುತ್ತಿದ್ದು, ಇದರಿಂದ ಸಾರ್ವಜನಿಕರ ಓಡಾಟಕ್ಕೆ ತುಂಬಾ ತೊಂದರೆ ಉಂಟಾಗುತ್ತಿರುವುದಾಗಿ ಸಭೆಯಲ್ಲಿ ಶ್ರೀ.ಅ.ಬ.ಶಿವಕುಮಾರ್ ರವರು ತಿಳಿಸಿದರು.
6. ಯಲಹಂಕ ಬಿ.ಬಿ.ಎಂ.ಪಿ ಕಛೇರಿಯಿಂದ 401 ಬಸ್ ಸ್ಟಾಂಡ್ ಮೂಲಕ ಬಿಡಿ.ಕೆ ವೃತ್ತದವರೆಗೆ ರಸ್ತೆಗೆ ಅಡ್ಡಲಾಗಿ ದ್ವಿಚಕ್ರ ವಾಹನಗಳನ್ನು ನಿಲ್ಲಿಸುತ್ತಿದ್ದು, ಇದರಿಂದ ವಾಹನ ಸಂಚಾರಕ್ಕೆ ತುಂಬಾ ತೊಂದರೆ ಉಂಟಾಗುತ್ತಿರುವುದಾಗಿ ಹಾಗೂ ಕೂಡಲೇ ಟ್ರಾಫಿಕ್ ಪೋಲಿಸ್‌ನವರು ವಾಹನಗಳ ನಿಲ್ದಾಣವಲ್ಲದ ಜಾಗಗಳಲ್ಲಿ ವಾಹನ ಪಾರ್ಕಿಂಗ್ ಮಾಡುವವರ ವಿರುದ್ಧ ಶಿಸ್ತು ಕ್ರಮ ವಹಿಸಲು ಕೋರಿದರು.

7. ಮಾರುತಿನಗರ 3ನೇ ಮುಖ್ಯರಸ್ತೆ ಹಾಗೂ 6ನೇ ಅಡ್ಡರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಕೊಳ ಸಾಲುಗಳಲ್ಲಿ ನೀರು ಸೋರುತ್ತಿರುವುದರಿಂದ ಡಾಂಬರು ರಸ್ತೆಗಳು ಹಾಳಾಗುತ್ತಿರುವುದಾಗಿ ಸಭೆಯಲ್ಲಿ ಸಾರ್ವಜನಿಕರು ಕೋರಿದರು.
8. ಆಲ್ಪಾ ಶಾಲೆಯ ರಸ್ತೆ ಹಾಗೂ ಯಲಹಂಕ ಸರ್ಕಾರಿ ಆಸ್ಪತ್ರೆ ರಸ್ತೆಯ ಮದ್ಯಭಾಗದಲ್ಲಿ ಮ್ಯಾನ್ ಹೋಲ್ ಲಿಕೇಜ್ ಆಗುತ್ತಿದ್ದು,ಇದರಿಂದ ಡಾಂಬರು ರಸ್ತೆಗಳು ಹಾಳಾಗುತ್ತಿರುವುದಾಗಿ ಸಭೆಯಲ್ಲಿ ಸಾರ್ವಜನಿಕರು ಕೋರಿದರು.
9. ಕೋಗಿಲು ಮುಖ್ಯರಸ್ತೆಯಲ್ಲಿನ ಮಾರುತಿನಗರ 1ನೇ ಮುಖ್ಯರಸ್ತೆ ಪ್ರವೇಶ ದ್ವಾರದಲ್ಲಿ ರಸ್ತೆಗೆ ಬದಿಯಲ್ಲಿ 2 ಸಂಖ್ಯೆ ಮರಗಳು ಇದ್ದು, ಈ ಮರಗಳನ್ನು ತೆರವುಗೊಳಿಸಲು ಹಾಗೂ ಸಾರ್ವಜನಿಕರು ರಸ್ತೆಯ ತಿರುವುಗಳಲ್ಲಿ ಸುಗಮವಾಗಿ ಸಂಚಾರ ಮಾಡಲು ಅನುಕೂಲ ಮಾಡಲು ಸಭೆಯಲ್ಲಿ ಕೋರಿದರು.
10. ವೆಂಕಟಾಲ ಜನತಾ ಕಾಲೋನಿಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಚೆಂಬರ್‌ಗಳು ತುಂಬಿ ಹರಿಯುತ್ತಿದ್ದು, ಇದರಿಂದ ರಸ್ತೆಗಳು ಹಾಳಾಗುತ್ತಿರುವುದಾಗಿ ಚೆಂಬರ್‌ಗಳನ್ನು ರಿಪೇರಿ ಮಾಡಿಕೊಡಬೇಕೆಂದು ಹಾಗೂ ಕಂಬಳಿ ಹುಳುಗಳು ಹೆಚ್ಚಾಗಿದ್ದು, ಈ ಜಾಗದಲ್ಲಿ ಸ್ಯಾನಿಟೈಷನ್ ಮಾಡಿಸಿಕೊಡಬೇಕೆಂದು ಸಭೆಯಲ್ಲಿ ಶ್ರೀಮತಿ. ಶೋಭ ಲಿಂಕ್ ವರ್ಕರ್ಸ್ ರವರು ಕೋರಿದರು.
11. ಕೆಂಪೇಗೌಡ ವಾರ್ಡ್ ನಂ-01ರ ವ್ಯಾಪ್ತಿಯಲ್ಲಿನ ಖಾಲಿ ನಿವೇಶನಗಳಲ್ಲಿ ಬೆಳೆದಿರುವ ಗಿಡಗಂಟೆಗಳಿಂದ ಅಕ್ಕಪಕ್ಕದ ಮನೆಗಳಿಗೆ ಹಾವು ಹಾಗೂ ವಿಷಕಾರಿಕ ಕ್ರೀಮಿಕಿಟಗಳು ಬರುತ್ತಿರುವುದಾಗಿ ಹಾಗೂ ಕೂಡಲೇ ಖಾಲಿ ನಿವೇಶನಗಳಲ್ಲಿ ಬೆಳೆದಿರುವ ಗಿಡಗಂಟೆಗಳನ್ನು ತೆರವುಗೊಳಿಸಿಕೊಡಬೇಕೆಂದು ಸಭೆಯಲ್ಲಿ ಶ್ರೀ.ಅ.ಬ.ಶಿವಕುಮಾರ್ ರವರು ಕೋರಿದರು.

ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡು ಮುಂದಿನ ಸಭೆಗೆ ಪೂರ್ಣ ಮಾಹಿತಿಯೊಂದಿಗೆ ಎಲ್ಲಾ ಅಧಿಕಾರಿಗಳು ಹಾಜರಾಗಲು ಮಾನ್ಯ ನೋಡೆಲ್ ಅಧಿಕಾರಿಗಳು ಸಭೆಯಲ್ಲಿ ಸೂಚಿಸಿದರು. ಮುಂದಿನ ಸಭೆಯಲ್ಲಿ ಸಾಧಿಸಬೇಕಾದ ಗುರಿ ಹಾಗೂ ಸಾದನೆ ಬಗ್ಗೆ ಚರ್ಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

ಕಾರ್ಯದರ್ಶಿಗಳು/ ಸಹಾಯಕ ಅಭಿಯಂತರರು
ವಾರ್ಡ್ ಕಮಿಟಿ, ವಾರ್ಡ್ ನಂ. 01(ಕೆಂಪೇಗೌಡ)

ವಾರ್ಡ್‌ನ ನೋಡೆಲ್ ಅಧಿಕಾರಿಗಳು
ವಾರ್ಡ್ ಕಮಿಟಿ, ವಾರ್ಡ್ ನಂ. 01(ಕೆಂಪೇಗೌಢ)

ಪ್ರತಿಯನ್ನು:

ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳ ಮಾಹಿತಿಗಾಗಿ.

1. ಶ್ರೀ.ರಜನಿಕಾಂತ್ ಮಳ್ಳಿ, ನೋಡಲ್ ಅಧಿಕಾರಿಗಳು.

## ಅಧಿಕಾರಿಗಳ ಮಾಹಿತಿಗಾಗಿ.

1. ಮಾನ್ಯ ಜಂಟಿ ಆಯುಕ್ತರು ಯಲಹಂಕ ವಲಯರವರ ಮಾಹಿತಿಗಾಗಿ.
2. ಮಾನ್ಯ ಮುಖ್ಯ ಅಭಿಯಂತರರು ಯಲಹಂಕ ವಲಯರವರ ಮಾಹಿತಿಗಾಗಿ.
3. ಆರೋಗ್ಯ ವೈದ್ಯಾಧಿಕಾರಿಗಳು ಯಲಹಂಕ ವಲಯರವರ ಮಾಹಿತಿಗಾಗಿ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ರವರ ಸೂಕ್ತ ಕ್ರಮಕ್ಕಾಗಿ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ವಿಭಾಗ ಬಿ.ಬಿ.ಎಂ.ಪಿ ರವರ ಸೂಕ್ತ ಕ್ರಮಕ್ಕಾಗಿ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, (ವಿದ್ಯುತ್) ಯಲಹಂಕರವರ ಸೂಕ್ತ ಕ್ರಮಕ್ಕಾಗಿ.